# ನಿಮ್ಮೊಡನೆ

## ಜನಸಂಖ್ಯೆಯಲ್ಲಿ ಚಾಂಪಿಯನ್ ಆದ ದೇಶದಲ್ಲಿ ತುತ್ತಿಗೂ ತತ್ವಾರ ಪಡುವವರ ಸಂಖ್ಯೆ ದೊಡ್ಡದು

ಭಾರತವು ಜನಸಂಖ್ಯೆ ಹಾಗೂ ಸಂಪತ್ತು ಎರಡರಲ್ಲಿಯೂ ಶ್ರೀಮಂತವಾಗಿದೆ. ಹೀಗಿದ್ದೂ ಜಾಗತಿಕ ಹಸಿವಿನ ಸೂಚ್ಯಂಕದಲ್ಲಿ ಭಾರತದ ಸ್ಥಾನ (121 ದೇಶಗಳ ಪೈಕಿ 107ನೇ ಸ್ಥಾನ) ಮತ್ತಷ್ಟು ಕುಸಿದಿದೆ. ಹಸಿವಿನ ಸೂಚ್ಯಂಕದಲ್ಲಿ, ಕೃಷಿ ಪ್ರಧಾನ ರಾಷ್ಟ್ರವೊಂದರ ಇಂತಹ ಕೆಳಮುಖ ಚಲನೆಯು ಅನೇಕ ಪ್ರಶ್ನೆಗಳಿಗೆ ಕಾರಣವಾಗುತ್ತದೆ.

ಭಾರತವು ವಿಶ್ವದಲ್ಲೇ ಅತಿಹೆಚ್ಚು ಜನಸಂಖ್ಯೆ ಇರುವ ದೇಶವೆನಿಸಿದೆ. ಈವರೆಗೆ ಅತಿಹೆಚ್ಚು ಜನಸಂಖ್ಯೆ ಇರುವ ದೇಶ ಎನಿಸಿದ್ದ ಚೀನಾ ಎರಡನೇ ಸ್ಥಾನಕ್ಕೆ ಇಳಿದಿದೆ. ವಿಶ್ವಸಂಸ್ಥೆಯ ಜಾಗತಿಕ ಜನಸಂಖ್ಯಾ ಅಂದಾಜು ವರದಿ ಪ್ರಕಾರ, ವಿಶ್ವದ ಒಟ್ಟು ಜನಸಂಖ್ಯೆ 804 ಕೋಟಿ ದಾಟಿದೆ. ಇದರಲ್ಲಿ ಭಾರತದ ಪಾಲು ಶೇಕಡ 17.75ರಷ್ಟು. ಭಾರತದಲ್ಲಿ 142.86 ಕೋಟಿ ಜನರಿದ್ದಾರೆ. ಈ ಸಂಖ್ಯೆ ಚೀನಾಕ್ಕಿಂತ 30 ಲಕ್ಷದಷ್ಟು ಹೆಚ್ಚು ಎಂದು ವಿಶ್ವಸಂಸ್ಥೆ ಅಂದಾಜು ಮಾಡಿದೆ.

ಈ ವರದಿಯು ಹಲವು ಆಸಕ್ತಿಕರ ಅಂಶಗಳನ್ನು ನಮ್ಮ ಮುಂದಿಟ್ಟಿದೆ. ವಿಶ್ವದ ಜನಸಂಖ್ಯೆಯನ್ನು ವಿವಿಧ ವಯೋಮಾನಗಳಡಿ ವರ್ಗೀಕರಿಸಲಾಗಿದ್ದು, ಅದರ ಅನುಸಾರ 'ಉತ್ಪಾದಕ' ವಯೋಮಾನದ ಅಡಿ ಬರುವ ಜನಸಂಖ್ಯೆಯ ಪ್ರಮಾಣ ಶೇ. 68ರಷ್ಟು ಎಂಬುದು ಗಮನಾರ್ಹ. 15ರಿಂದ 64 ವರ್ಷ ವಯಸ್ಸಿನವರನ್ನು ಈ ವರ್ಗಕ್ಕೆ ಸೇರಿಸಲಾಗಿದೆ. ಅರ್ಥಶಾಸ್ತ್ರದ ಪರಿಭಾಷೆಯಲ್ಲಿ ಈ ವರ್ಗವನ್ನು 'ಉತ್ಪಾದಕ ಜನಸಂಖ್ಯೆ' ಎಂದು ಕರೆಯಲಾಗುತ್ತದೆ. ಅಂದರೆ ದುಡಿಯುವ ಸಾಮರ್ಥ್ಯ ಹೊಂದಿರುವಂತಹ ಜನಸಮೂಹ. ಈ ಕಾರಣದಿಂದಲೇ ಭಾರತವನ್ನು 'ಯುವರಾಷ್ಟ್ರ' ಎಂದು ಕರೆಯಲಾಗುತ್ತದೆ.

ಈ ವರ್ಗಕ್ಕೆ ಒಳಪಡುವವರ ಸಂಖ್ಯೆ ಈಗ 97 ಕೋಟಿಗೆ ಏರಿದೆ. ಮುಂದಿನ ದಶಕಗಳಲ್ಲೂ ಇವರ ಸಂಖ್ಯೆ ಏರುಗತಿಯಲ್ಲೇ ಇರಲಿದೆ. 2050ರ ವೇಳೆಗೆ ಈ ವಯೋಮಾನದ ಜನರ ಸಂಖ್ಯೆ 113 ಕೋಟಿಗೆ ಏರಲಿದೆ ಎಂದು ವಿಶ್ವಸಂಸ್ಥೆ ಅಂದಾಜು ಮಾಡಿದೆ. ದುಡಿಯುವ ಕೈಗಳು ಹೆಚ್ಚಿಗೆ ಇರುವುದು ಯಾವುದೇ ಅಭಿವೃದ್ಧಿಶೀಲ ದೇಶಕ್ಕೆ ಶಕ್ತಿದಾಯಕ. ಆದರೆ ಅವರಿಗೆ ಕೈತುಂಬ ಕೆಲಸ ಕೊಡುವ ಸಾಮರ್ಥ್ಯ ಆ ಸಮಾಜಕ್ಕೆ ಇರಬೇಕು. ಇಲ್ಲವಾದಲ್ಲಿ ನಿರುದ್ಯೋಗ, ಅರೆಉದ್ಯೋಗ ಸಮಸ್ಯೆ ತಲೆದೋರುತ್ತದೆ. ಅದು ಬೇರೆ ಬೇರೆ ಬಗೆಯ ತುಮುಲಗಳಿಗೆ ದಾರಿ ತೆಗೆಯುತ್ತದೆ, ಸಮಾಜದ ಸ್ವಾಸ್ಥ್ಯ ಕೆಡಲು ಕಾರಣವಾಗುತ್ತದೆ. ಹಾಗಾಗಿ ಈ ಅಂಶವು ಒಂದು ನೆಲೆಯಲ್ಲಿ ಅವಕಾಶವೂ ಹೌದು, ಮತ್ತೊಂದು ನೆಲೆಯಲ್ಲಿ ಸವಾಲೂ ಹೌದು. ಈ ಸಮೂಹದ ಕೌಶಲ–ಸಾಮರ್ಥ್ಯಗಳನ್ನು ಹೇಗೆ ಬಳಸಿಕೊಳ್ಳುತ್ತೇವೆ ಎಂಬುದರ ಮೇಲೆ ಅದು ಸವಾಲೋ ಇಲ್ಲವೆ ಅವಕಾಶವೋ ಎಂಬುದು ನಿರ್ಧಾರವಾಗುತ್ತದೆ.

ಅನುತ್ಪಾದಕ ವರ್ಗ ಎಂದು ಕರೆಯಲಾಗುವ 14 ವರ್ಷದ ಒಳಗಿನವರು ಒಟ್ಟು ಜನಸಂಖ್ಯೆಯ ಕಾಲುಭಾಗದಷ್ಟಿದ್ದಾರೆ. 65 ದಾಟಿದವರು ಕೂಡ ಇದೇ ವರ್ಗಕ್ಕೆ ಸೇರುತ್ತಾರೆ. ಇವರ ಪಾಲು ಜಾಗತಿಕ ಜನಸಂಖ್ಯೆಯಲ್ಲಿ ಶೇ. 10ರಷ್ಟು. ಈ ವಯೋಮಾನದವರ ಪ್ರಮಾಣ ಭಾರತದಲ್ಲಿ ಜಾಗತಿಕ ಸರಾಸರಿಗೆ ಹೋಲಿಸಿದರೆ ಕಡಿಮೆ ಎಂಬುದು ಅರ್ಥ ವ್ಯವಸ್ಥೆಯ ಬೆಳವಣಿಗೆಯ ದೃಷ್ಟಿಯಿಂದ ಅನುಕೂಲಕರ ಅಂಶವಾಗಿ ಪರಿಣಮಿಸಬಹುದು.

ಜನಸಂಖ್ಯೆಯಲ್ಲಿ ಚೀನಾವನ್ನು ಹಿಂದಿಕ್ಕುವುದು, ನಂಬರ್ 1 ಸ್ಥಾನ ಪಡೆಯುವುದು ಹೆಮ್ಮೆಯ ಸಂಗತಿಯೇನಲ್ಲ. ಮಾನವ ಸಂಪನ್ಮೂಲವನ್ನು ದಕ್ಷವಾಗಿ ಬಳಸಿಕೊಳ್ಳಲು ಸಾಧ್ಯವಾದರೆ ಮಾತ್ರ ಅದು ಅರ್ಥವ್ಯವಸ್ಥೆಯ ಬೆಳವಣಿಗೆಯ ನೆಲೆಯಲ್ಲಿ ಪೂರಕವಾಗಿ ಒದಗಿಬರುವುದು. ಇಲ್ಲವಾದರೆ ಹೊರೆಯಾಗಲಿದೆ. ಅಷ್ಟೂ ಜನರಿಗೆ ಆಹಾರ, ಉಡುಪು, ನೆಲೆ ಒದಗಿಸಬೇಕು. ಶಿಕ್ಷಣ ಮತ್ತು ಆರೋಗ್ಯದಂತಹ ಮೂಲ ಸೌಲಭ್ಯ ಕಲ್ಪಿಸಬೇಕು. ಉದ್ಯೋಗಾವಕಾಶಗಳನ್ನು ಒದಗಿಸಬೇಕು. ಕಲ್ಪಿಸುವಂತಹ ಈ ಕ್ರಿಯೆ ವರ್ಷದಿಂದ ವರ್ಷಕ್ಕೆ ಹೆಚ್ಚುತ್ತಲೇ ಹೋಗುತ್ತದೆ. ಪ್ರಕೃತಿ ಸಂಪತ್ತಿನ ಮೇಲೆ ಒತ್ತಡ ಕೂಡ ಹೆಚ್ಚುತ್ತಲೇ ಹೋಗುತ್ತದೆ.

ಭಾರತದ ಜಿಡಿಪಿಯು ಈಗ ವಿಶ್ವದಲ್ಲಿ 5ನೇ ಸ್ಥಾನದಲ್ಲಿದೆ. ಆದರೆ ದೇಶದ ಅರ್ಧಕ್ಕಿಂತ ಹೆಚ್ಚಿನ ಪ್ರಮಾಣದ ಸಂಪತ್ತು ಶೇಕಡ 1ರಷ್ಟು ಶ್ರೀಮಂತರ ಬಳಿ ಸಂಗ್ರಹಗೊಂಡಿದೆ ಎಂದು ಆಕ್ಸ್‌ಫ್ಯಾಮ್ ವರದಿಯೊಂದು ಹೇಳಿದೆ. ಭಾರತವು ಜನಸಂಖ್ಯೆ ಹಾಗೂ ಸಂಪತ್ತು ಎರಡರಲ್ಲಿಯೂ ಶ್ರೀಮಂತವಾಗಿದೆ. ಹೀಗಿದ್ದೂ ಜಾಗತಿಕ ಹಸಿವಿನ ಸೂಚ್ಯಂಕದಲ್ಲಿ ಭಾರತದ ಸ್ಥಾನ (121 ದೇಶಗಳ ಪೈಕಿ 107ನೇ ಸ್ಥಾನ) ಮತ್ತಷ್ಟು ಕುಸಿದಿದೆ. ಹಸಿವಿನ ಸೂಚ್ಯಂಕದಲ್ಲಿ, ಕೃಷಿ ಪ್ರಧಾನ ರಾಷ್ಟ್ರವೊಂದರ ಇಂತಹ ಕೆಳಮುಖ ಚಲನೆಯು ಅನೇಕ ಪ್ರಶ್ನೆಗಳಿಗೆ ಕಾರಣವಾಗುತ್ತದೆ. 80 ಕೋಟಿ ಜನರು ಈಗಲೂ ಪಡಿತರ ವ್ಯವಸ್ಥೆಯ (ಪಿಡಿಎಸ್) ಫಲಾನುಭವಿಗಳು. ಈಗ ಇರುವ ಜನರನ್ನು ಹಾಗೂ ಮುಂದೆ ಜನಿಸಬಹುದಾದ ಜನರನ್ನು ಸಲಹಲು ಅಗತ್ಯವಿರುವಷ್ಟು ಸಂಪನ್ಮೂಲವು ಭೂಮಿಯ ಮೇಲೆ ಇದೆ. ಆದರೆ ಆ ಸಂಪನ್ಮೂಲದ ಮರುಹಂಚಿಕೆ ಆಗಬೇಕು. ಸಂಪನ್ಮೂಲಗಳನ್ನು ಈಗ ಕೆಲವರು ಮಾತ್ರ ಬಳಸುತ್ತಿದ್ದಾರೆ. ಇದು ಮುಂದಿನ ವರ್ಷಗಳಲ್ಲಿ ಆರ್ಥಿಕ ಹಾಗೂ ಸಾಮಾಜಿಕ ಸಂಘರ್ಷಗಳಿಗೆ ಕಾರಣವಾಗಬಹುದು. ಆದಕಾರಣ ನಮ್ಮ ಅಭಿವೃದ್ಧಿಯ ದಿಕ್ಕು–ದೆಸೆ ಬದಲಾಗಬೇಕಾದ ಅಗತ್ಯ ಇದೆ. ಇದೇ ವೇಳೆ, ಲಭ್ಯ ಸಂಪನ್ಮೂಲಗಳನ್ನು ಯಾರೂ ಅತಿಯಾಗಿ ಬಳಕೆ ಮಾಡಿಕೊಳ್ಳದಂತೆ ಹಾಗೂ ಸಂಪನ್ಮೂಲಗಳನ್ನು ದುರ್ಬಳಕೆ, ಪೋಲು ಮಾಡದಂತೆ ನಿಗಾ ವಹಿಸುವುದು ಕೂಡ ಅಗತ್ಯ.

■ ಎನ್. ಉದಯಕುಮಾರ್

